ಶ್ರೀ ಬಿ. ಎಂ. ಇದಿನಬ್ಬ : ಬೀಡಿ ಕಾರ್ಮಿಕರು ಬಹಳ ಚಾಸ್ತಿ ಇರುವಂತಾದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಅವರಿಗೆ ಬಹಳ ತೊಂದರೆ ಉಂಟು. ಈಗ 46 ಮಂದಿ ಮಾಲೀಕರು, ಗುತ್ತಿಗೆದಾರರು 2309, ಕಾರ್ಮಿಕರ ಸಂಖ್ಯೆ 2 ಲಕ್ಷ 21 ಸಾವಿರದ 587 ಎಂದು ಹೇಳಿದ್ದೀರಿ. ಈ ಗುತ್ತಿಗೆದಾರರಿಂದ ಕಾರ್ಮಿಕರಿಗೆ ತೊಂದರೆಯಾಗುತ್ತಿದೆಯೆ ಎಂದು ನಾನು ಕೇಳಿದ್ದಕ್ಕೆ, ಇಲ್ಲ ಎಂದು ಹೇಳಿದ್ದೀರಿ. ಆದರೆ ಅನೇಕ ಪತ್ರಿಕೆಗಳಲ್ಲಿ ಮತ್ತು ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಗುತ್ತಿಗೆದಾರರು ಕೆಲವರಿಗೆ ಬೇಕಾದಷ್ಟು ಉಪದ್ರವವನ್ನು ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಅವರು ಏನಾದರೂ ಕಾರ್ಮಿಕರಿಗೆ ಈ ರೀತಿ ಉಪದ್ರವ ಕೊಡುವುದಿದ್ದರೆ ಅದನ್ನು ತಪ್ಪಿಸಿ ಅವರಿಗೆ ಉಪಕಾರ ಮಾಡುವಂಥ ಕಾರ್ಯಕ್ರಮ ಏನಾದರೂ ಮಾಡುತ್ತೀರಾ ಸ್ವಾಮಿ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷರೇ, ಯಾವ ರೀತಿಯಲ್ಲಿ ಕಾರ್ಮಿಕರಿಗೆ ಉಪದ್ರವವಾದರೆ, ನಮಗೆ ದೂರು ಬಂದರೆ ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

<u>ತಡೆಹಿಡಿಯಲಾದ ಪ್ರಶ್ನೆಗಳು</u>

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೇ, 130ನೇ ಸಂಖ್ಯೆಯ ಪ್ರಶ್ನೆಯನ್ನು ಗ್ರಾಮಾಭಿವೃದ್ಧಿ ಮಂತ್ರಿಗಳನ್ನು ಕೇಳುತ್ತೇನೆ.

ಅಧ್ಯಕ್ಷರು : ಇದಕ್ಕೆ ಉತ್ತರವನ್ನು ನಗರಾಭಿವೃದ್ಧಿ ಮಂತ್ರಿಗಳು ಕೊಡುತ್ತಾರೆ.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) : ನಾನು ಕಾನ್‌ಫರೆನ್ಸಿಗೆ ಹೋಗಿದ್ದೆ. ನಿನ್ನೆ ತಾನೆ ಬಂದೆ. ನಾನು ತಮಗೆ ಕಾಗದವನ್ನು ಕಳಿಸಿದ್ದೆ.

ಅಧ್ಯಕ್ಷರು : ಇದು ಹೆಲ್ಡ್ ಓವರ್ ಆಗಿದ್ದ ಪ್ರಶ್ನೆ.

ಶ್ರೀ ಚೌಡರೆಡ್ಡಿ : ನಾನು ಬೇರೆಯವರಿಗೆ ಹೇಳಿಬಿಟ್ಟು ಕಾನ್‌ಫರೆನ್ಸಿಗೆ ಹೋಗಿದ್ದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೇ, ಸರ್ಕಾರದ ವರ್ತನೆ ತಮಗಾದರೂ ಸರಿಕಾಣುತ್ತದೆಯೆ? ಈ ರೀತಿ ಮುಂದೂಡುವ ಪ್ರಶ್ನೆಗಳಿಗೂ ಉತ್ತರ ಬರುವುದಿಲ್ಲ ಎಂದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ನನ್ನ ನಾಲ್ಕು ಪ್ರಶ್ನೆಗಳಿಗೆ ಇದುವರೆಗೂ ಉತ್ತರ ಕೊಡುವುದಕ್ಕೆ ಆಗಿಲ್ಲ. ಸರ್ಕಾರ ಏನು ಕೆಲಸ ಮಾಡುತ್ತಿದೆ?

ಶ್ರೀ ಬಿ. ಹೆಚ್. ಬನ್ನಿಕೋಡ್ : ಮುಂದಿನ ಸಾಲಿನಲ್ಲಿ ಒಬ್ಬರಾದರೂ ಕ್ಯಾಬಿನೇಟ್ ಮಂತ್ರಿಗಳು ಇಲ್ಲ. ಉತ್ತರ ಕೊಡಲಿಕ್ಕೆ ಸಚಿವರು ನೋಡಿ, ಹುಡುಕಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಅವರಿಗೆ ಸ್ವಲ್ಪ ಹೇಳಿರಿ. ತಮ್ಮ ಹೇಳಿಕೆಯಿಂದ ಬುದ್ಧಿ ಬಂದಾದರೂ ಉತ್ತರ ಕೊಡುತ್ತಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದಕ್ಕೆ ಒಬ್ಬ ಮಂತ್ರಿಗಳನ್ನು ನೇಮಿಸಿ. ಸರಿಯಾಗಿ ಉತ್ತರ ಕೊಡುವುದಕ್ಕೆ ಒಬ್ಬರನ್ನು ನೇಮಿಸಿರಿ.

ಅಧ್ಯಕ್ಷರು : ಅವರು ತಯಾರಾಗಿ ಬಂದಿಲ್ಲ. ಇದನ್ನು ಮತ್ತೆ ಹೆಲ್ಡ್ ಓವರ್ ಮಾಡುತ್ತೇನೆ. ಪುನಃ ಮುಂದಿನವಾರ ತೆಗೆದುಕೊಳ್ಳೋಣ.

ಶ್ರೀ ಅಂಜನಮೂರ್ತಿ : ಮುಂದಿನವಾರವೋ ಅಥವಾ ಮುಂದಿನ ವರ್ಷವೋ?

ಅಧ್ಯಕ್ಷರು : ಅವರು ತಯಾರಾಗಿ ಬಂದಿಲ್ಲ. ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

<u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 5.3.93ರ ಲಿಖಿತ ಮೂಲಕ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 66 ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ 1250, 1370, 1370ಎ, 1414, 742, 1544, 249, 531, 159, 106, 963, 961, 1461, ಮತ್ತು 598 ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 52 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>ವಿಷಯ :- ಬೆಂಗಳೂರು ಸುತ್ತಮುತ್ತ ಹಸಿರು ಪಟ್ಟಿಯ ವಿಸ್ತೀರ್ಣ.</u>

Q:1135

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಬೆಂಗಳೂರು ನಗರ ಸುತ್ತಮುತ್ತಲಿನ ಹಸಿರು ಪಟ್ಟಿಯ ವಿಸ್ತೀರ್ಣ :
ಆ) ಹಸಿರು ಪಟ್ಟಿ ಪ್ರದೇಶದಲ್ಲಿ ಅನಧಿಕೃತ ಬೆಳವಣಿಗೆ ಆಗಿರುವ ವಿಸ್ತೀರ್ಣವನ್ನು ನಿರ್ಣಯಿಸಲು ಸಮೀಕ್ಷೆ ಮಾಡಲಾಗಿದೆಯೇ?
ಇ) ಇಲ್ಲದಿದ್ದಲ್ಲಿ ಹಸಿರು ವಲಯ ಪ್ರದೇಶದಲ್ಲಿ ಅನಧಿಕೃತ ಬೆಳವಣಿಗೆ ಆಗಿರುವ ವಿಸ್ತೀರ್ಣವನ್ನು ನಿರ್ಣಯಿಸುವ ಬಗ್ಗೆ ಸಮೀಕ್ಷೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :